ಸಹಕಾರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿಬಂಧಕರಿಗೆ ವಾಹನ ಸೌಕರ್ಯ.

3367 - ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಣ್ಯ ಇಲಾಖೆಯಲ್ಲಿ ಕಳ್ಳ ಸಾಗಾಣಿಕೆದಾರರಿಂದ ವಶಪಡಿಸಿಕೊಂಡಿರುವ ವಾಹನಗಳನ್ನು ಸಹಕಾರ ಇಲಾಖೆಗೆ ಕೊಡಿಸಲು ಸರ್ಕಾರಕ್ಕಿರುವ ತೊಂದರೆ ಏನು?

ಆ) ಸಹಕಾರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿಬಂಧಕರು ಮತ್ತು ಉಪ ನಿಬಂಧಕರಿಗೆ ವಾಹನಗಳ ಅವಶ್ಯಕತೆ ಇಲ್ಲವೆ?

ಶ್ರೀ ಎಸ್. ಆರ್. ಮೋರೆ. (ಸಹಕಾರ ರಾಜ್ಯ ಸಚಿವರು) :

ಅ) ಏನು ತೊಂದರೆ ಇಲ್ಲ.

ಆ) ವಾಹನಗಳ ಅವಶ್ಯಕತೆ ಇರುತ್ತದೆ.

ಹೆಗ್ಗಡದೇವನ ಕೋಟೆಯಲ್ಲಿ ನ್ಯಾಯಾಲಯದ ಕಟ್ಟಡ

3364 - ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಗ್ಗಡದೇವನಕೋಟೆಯಲ್ಲಿ ನ್ಯಾಯಾಲಯದ ಕಟ್ಟಡವಿದೆಯೆ?

ಆ) ಹಾಗಿದ್ದಲ್ಲಿ ನ್ಯಾಯಾಲಯದ ಕಟ್ಟಡವನ್ನು ಕಟ್ಟಲು ಸರ್ಕಾರದಿಂದ ಹಣ ಮಂಜೂರಾಗಿದೆಯೆ?

ಇ) ಹೆಗ್ಗಡದೇವನಕೋಟೆಯಲ್ಲಿ ನ್ಯಾಯಾಲಯದ ಕಟ್ಟಡವನ್ನು ಕಟ್ಟಲು ಸರ್ಕಾರವು ಹಣವನ್ನು ಎಂದಿನಿಂದ ಬಿಡುಗಡೆ ಮಾಡಲಿದೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) ಹೆಗ್ಗಡದೇವನಕೋಟೆಯಲ್ಲಿ ಮುನ್ಸೀಫ್ ಮತ್ತು ಜೆಎಂಎಫ್ಸಿ ಕೋರ್ಟಿಗೆ ಸ್ವಂತ ಕಟ್ಟಡ ಇರುವುದಿಲ್ಲ. ಆದರೆ ಈಗಿರುವ ನ್ಯಾಯಾಲಯವು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಆ) ಇಲ್ಲ.

ಇ) ರಾಜ್ಯದಲ್ಲಿ ದೊರೆಯುವ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ನಿವೇಶನಗಳನ್ನು ಸ್ವಾಧೀನ ಮಾಡಿಕೊಂಡ ನಂತರ, ಹೆಗ್ಗಡದೇವನಕೋಟೆಯಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳುವ ವಿಚಾರವನ್ನು ಪರಿಶೀಲಿಸಲಾಗುವುದು.

ಹೆಗ್ಗಡದೇವನಕೋಟೆ ಪದವಿ ಪೂರ್ವ ಕಾಲೇಜಿಗೆ ಇಂಗ್ಲೀಷ್ ಉಪನ್ಯಾಸಕರ ನೇಮಕ

3361 - ಶ್ರೀ ಎಂ. ಟಿ. ವೆಂಕಟೇಶ್ (ಹೆಗ್ಗಡದೇವನಕೋಟೆ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಗ್ಗಡ ದೇವನ ಕೋಟೆ ಪದವಿ ಪೂರ್ವ ಕಾಲೇಜಿಗೆ ಇಂಗ್ಲೀಷ್ ಉಪನ್ಯಾಸಕರನ್ನು ನೇಮಕ ಮಾಡದಿರಲು ಕಾರಣವೇನು?

ಆ) ಹೆಗ್ಗಡದೇವನ ಕೋಟೆ ಪದವಿ ಪೂರ್ವ ಕಾಲೇಜಿನಲ್ಲಿ ಎಂದಿನಿಂದ ಇಂಗ್ಲೀಷ್ ಉಪನ್ಯಾಸಕರ ಹುದ್ದೆ ಖಾಲಿ ಇದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಇಂಗ್ಲೀಷ್ ಉಪನ್ಯಾಸಕರ ಹುದ್ದೆಯನ್ನು ವರ್ಗಾವಣೆಯ ಮೂಲಕ ತುಂಬಿದೆ.

ಆ) ಖಾಲಿ ಇರುವುದಿಲ್ಲ.

ಎಪಿಎಂಸಿ ನಿಧಿಯಿಂದ ರಸ್ತೆ ಅಭಿವೃದ್ಧಿ

3474 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಪಿಎಂಸಿ ನಿಧಿಯಿಂದ ರಸ್ತೆ ಅಭಿವೃದ್ಧಿ ಕಾರ್ಯಗಳ ಸಲುವಾಗಿ ಪ್ರತಿ ತಾಲ್ಲೂಕಿಗೆ ರೂ 25.00 ಲಕ್ಷಗಳನ್ನು ಮಂಜೂರು ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಕೋಲಾರ ಜಿಲ್ಲೆಯ ಪ್ರತಿ ತಾಲ್ಲೂಕಿಗೆ 1989-90 ಮತ್ತು 1990-91ನೇ ಸಾಲಿನಲ್ಲಿ ಮೇಲ್ಕಂಡ ನಿಧಿಯಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

(ತಾಲ್ಲೂಕುವಾರು ವಿವರವನ್ನು ನೀಡುವುದು)

ಇ) ಜಿಲ್ಲೆಯಲ್ಲಿ ಈ ನಿಧಿಯಿಂದ ಪ್ರತಿ ತಾಲ್ಲೂಕಿನಲ್ಲಿ ಕೈಗೊಂಡ ರಸ್ತೆ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿವರವನ್ನು ಒದಗಿಸುವುದು

ಶ್ರೀ ಎಸ್. ಆರ್. ಮೋರೆ (ಸಹಕಾರ ಸಚಿವರು) :

ಅ) ಇಲ್ಲಾ.

ಆ) 'ಅ' ಗೆ ಕೊಟ್ಟ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕಿರ್ಲೋಸ್ಕರ್ ವಿದ್ಯುತ್ ಕಂಪನಿಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ

3371 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿರ್ಲೋಸ್ಕರ ವಿದ್ಯುತ್ ಕಂಪನಿಯ ನೌಕರರು ಗೃಹ ನಿರ್ಮಾಣ ಸಹಕಾರ ಸಂಘ ಒಂದನ್ನು ನಡೆಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಆದು ಈಗ ಅಸ್ಥಿತ್ವದಲ್ಲಿದೆಯೇ?

ಆ) ಸದರಿ ಸಂಘವು ಕೊಡಿಗೇಹಳ್ಳಿ ಎಂಬ ಸ್ಥಳದಲ್ಲಿ ನೌಕರಿಗಾಗಿ ಜಮೀನನ್ನು ಖರೀದಿ ಮಾಡಿ ಸಂಘದ ಸದಸ್ಯರುಗಳಿಂದ ಹತ್ತರು ಸಾವಿರ ರೂಪಾಯಿಗಳ ಡೆಪಾಜಿಟ್ಟುಗಳನ್ನು ಪಡೆದಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?

ಇ) ಸದರಿ ಜಮೀನನ್ನು ಸಂಘದ ಪರವಾಗಿ ಸ್ವಾಧೀನ ಪಡಿಸಿಕೊಳ್ಳಲು ಇರುವ ಅಡ್ಡಿ ಆತಂಕಗಳೇನು?

ಈ) ಸಂಘದ ಮೂಲ ಭೂತ ನೌಕರರಿಗಾಗಿ ನಿವೇಶನಗಳನ್ನು ಹಂಚುವ ಉದ್ದೇಶದಿಂದ ಕೊಡಿಗೆ ಹಳ್ಳಿಯಲ್ಲಿ ಖರೀದಿಸುವ ಜಮೀನಿನ ಬಾಬ್ತಿನಲ್ಲಿ ಹತ್ತಾರು ಸಾವಿರ ರೂಪಾಯಿಗಳನ್ನು ಸದಸ್ಯರ ಠೇವಣಿ ಮಾಡಿಯೂ ಕೂಡ ನಿವೇಶನ ಪಡೆಯದೆ ತ್ರಿಶಂಕು ಸ್ಥಿತಿಯಲ್ಲಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕೂಡಲೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್. ಆರ್. ಮೋರೆ (ಸಹಕಾರ ಸಚಿವರು) :